2019 ಕ.ತೀ.ವ 1251

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

## ಶ್ರೀ ಎಸ್.ಪಿ. ಅಂಗರಾಜು ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ, ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಲೋಕೋಪಯೋಗಿ ಇಲಾಖೆ ಹಾಗೂ ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿಗಳು.

ಸಕಲೇಶಪುರ ಪಟ್ಟಣ ಪುರಸಭೆ ವ್ಯಾಪ್ತಿ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 48 ಎಂದು ಅಧಿಸೂಚಿಸಲಾಗಿರುವ ಬೆಂಗಳೂರು–ಮಂಗಳೂರು ರಸ್ತೆಯನ್ನು ಸೇರಿಸುವ ಮಾರ್ಗದಲ್ಲಿನ ಅರ್ಜಿ ಸ್ವತ್ತುಗಳು/ಕಟ್ಟಡಗಳ ಕಾನೂನುಬದ್ಧ ಸ್ವಾಧೀನತೆಯಲ್ಲಿ ಎಲ್ಲಾ ಅರ್ಜಿದಾರರು ಸಂಪೂರ್ಣ ಮಾಲೀಕರೆಂದು ಕ್ಲೇಮು ಮಾಡಿದ್ದಾರೆ. ಎದುರುದಾರರು, ಬಾಧಿತರ ಸ್ವತ್ತಿನ ಭಾಗವನ್ನು ಅತಿಕ್ರಮಣ ಮಾಡುವ ಮೂಲಕ ಸಾರ್ವಜನಿಕ ರಸ್ತೆಗಳನ್ನು ನಿರ್ಮಿಸುತ್ತೇವೆಂದು ದರ್ಪದಿಂದ ಆಕ್ರಮಣ ಮಾಡಿಕೊಂಡು, ಅವುಗಳನ್ನು ಕೆಡವುವ ಅಥವಾ ಕೆಡವುತ್ತೇವೆಂದು ಬೆದರಿಸುವ ಎದುರುದಾರರ ಆಪಾದಿತ ಸೊಕ್ಕಿನ ಕೃತ್ಯದ ವಿರುದ್ಧ ಬಾಧಿತರಾಗಿ ಅವರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯಾಲಯ ಸರ್ಕಾರಿ ವಕೀಲರಾದ ಶ್ರೀ ದಿಲ್‌ದಾರ್ ಶಿರಾಳಿಯವರು ಹಾಗೂ ಅಧಿಕೃತ ಎದುರುದಾರರು, ಹಾಗೆಯೇ ಪಟ್ಟಣ ಪುರಸಭೆಯ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯದರ್ಶಿಗಳ ಪಟ್ಟಿಯಲ್ಲಿರುವ ವಕೀಲರಾದ ಶ್ರೀ ರವಿಶಂಕರ್‌ರವರು, ಪ್ರಶ್ನಿತ ನಿರ್ಮಿತಿಗಳನ್ನು ಸ್ಪಷ್ಟವಾಗಿ ಅತಿಕ್ರಮಿಸಲಾಗಿದೆಯೆಂದು; ದಿನಾಂಕ: 18.02.1976, ಸಂಖ್ಯೆ: ಪಿಡಬ್ಲ್ಯೂಡಿ 43

*ರಿಟ್ ಅರ್ಜಿ ಸಂಖ್ಯೆ: 30738/2018 ಇದರೊಂದಿಗೆ ಇತರೆ, ದಿನಾಂಕ 14ನೇ ಜನವರಿ, 2019.

ಸಿಆರ್‌ಎಂ 75ನ್ನು ಹೊಂದಿರುವ ಸರ್ಕಾರಿ ಆದೇಶವು, ಭಾರತೀಯ ರಸ್ತೆ ಕಾಂಗ್ರೆಸ್ ಅಂಕಿ-ಅಂಶ ಮೌಲ್ಯಗಳ ಪರಿಭಾಷೆಯಲ್ಲಿ, ನಿರ್ದಿಷ್ಟವಾಗಿ, ರಾಷ್ಟ್ರೀಯ ಹೆದ್ದಾರಿಯ ಮಧ್ಯದಿಂದ ಅದರ ಎರಡೂ ಬದಿಗಳಲ್ಲಿ 40 ಮೀಟರ್‌ಗಳವರೆಗೆ ಯಾವುದೇ ನಿರ್ಮಿತಿಗಳನ್ನು ನಿರ್ಮಿಸಬಾರದೆಂಬುದನ್ನು ದಿನಾಂಕ: 09.05.1988 ಸಂಖ್ಯೆ: ಪಿಡಬ್ಲ್ಯೂಡಿ 46 ಸಿಎನ್‌ಎಚ್ 88ನ್ನು ಹೊಂದಿರುವ ಸರ್ಕಾರಿ ಸುತ್ತೋಲೆ ಇದರ ಜೊತೆಗೆ ಇತರ ರಾಷ್ಟ್ರೀಯ ಹೆದ್ದಾರಿಗಳ ನಡುವಿನ ಅಳತೆಗಳನ್ನು ಸೂಚಿಸಿದ್ದು, ಅದರ ಎರಡೂ ಬದಿಗಳಲ್ಲಿನ ನಿರ್ಮಿತಿಗಳ ನಿರ್ಮಾಣಕ್ಕೆ ಸಂಬಂಧಿಸಿದ ನಿಷೇಧಿತ ವ್ಯಾಪ್ತಿಗಳನ್ನು ಸೂಚಿಸಿದೆಯೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ.

ಶ್ರೀ ಪವನ್ ಚಂದ್ರಶೆಟ್ಟಿಯವರ ವಾದವು ಅವರ ಅರ್ಜಿಗಳಲ್ಲಿನ ಎಂದರೆ ರಿಟ್ ಅರ್ಜಿ ಸಂಖ್ಯೆ: 32285-32292/2018, ರಿಟ್ ಅರ್ಜಿ ಸಂಖ್ಯೆ: 35708-35709/ 2018ರಲ್ಲಿರುವ ಹಾಗೂ ಸಂಬಂಧಪಟ್ಟ ವಿಷಯಗಳಲ್ಲಿರುವ ಸಂಬಂಧಪಟ್ಟ ನಿರ್ಮಿತಿಗಳನ್ನು ಎದುರುದಾರ – ಉಪವಿಭಾಗಾಧಿಕಾರಿಯವರು ಜೆಸಿಬಿ ವಾಹನಗಳನ್ನು ಬಳಸುವ ಮೂಲಕ ದರ್ಪದ ಕೃತ್ಯವೆಸಗುವ ಮೂಲಕ ವ್ಯಾಪಕವಾಗಿ ನಷ್ಟವನ್ನುಂಟು ಮಾಡಿರುವರು ಎಂಬುದಾಗಿದ್ದು, ಅನುಬಂಧಗಳಲ್ಲಿರುವಂತೆ ಹಾಜರುಪಡಿಸಲಾದ ನಿರ್ವಿವಾದಿತ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ ನಿಜವಾಗಿರುವುದು ಕಂಡುಬರುತ್ತದೆ. ಈ ವಾದವು, ನಂಬಿಕೆಯನ್ನು ಹುಟ್ಟಿಸುತ್ತದೆ, ಎದುರುದಾರ ರಾಜ್ಯ ಹಾಗೂ ಅದರ ಅಧಿಕಾರಿಗಳು ಆಕ್ಷೇಪಣೆಗಳ ವಿವರಣೆಯಲ್ಲಿನ ವಾದವನ್ನು ನಿರಾಕರಣೆಯ ರೀತಿಯಲ್ಲಿ ಕೈಗೆತ್ತಿಕೊಂಡಿಲ್ಲ. ಅದೇನೇ ಇದ್ದರೂ, ಈ ವಿಷಯವು ಸತ್ಯವನ್ನು ಶೋಧಿಸಲು ಹಾಗೂ ಇದರ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜವಾಬ್ದಾರಿಯನ್ನು ಹಿಡಿದಿಡಲು ಆಳವಾದ ತನಿಖೆಯನ್ನು ಅಗತ್ಯಪಡಿಸುತ್ತದೆ.

ಮೇಲಿನ ಸನ್ನಿವೇಶಗಳಲ್ಲಿ, ಈ ಅರ್ಜಿಗಳು ಯಶಸ್ವಿಯಾಗಿವೆ; ಎದುರುದಾರರ ಪರಮಾದೇಶ ರಿಟ್ ಅಂಶಗಳು, ಅರ್ಜಿದಾರರು ಅತಿಕ್ರಮಿಸಿಕೊಂಡ ವಿವಾದವನ್ನು ಕರ್ನಾಟಕ ಪಟ್ಟಣ ಪುರಸಭಾ ಅಧಿನಿಯಮ, 1986ರ 82ನೇ ಪ್ರಕರಣ ಅಥವಾ ಪ್ರಕರಣದ ಸಂಗತಿಗಳಿಗೆ ಅನ್ವಯವಾಗಬಹುದಾದ ಇತರ ಯಾವುದೇ ಕಾನೂನಿಗೆ ಅನುಸಾರವಾಗಿ ಎದುರುದಾರ-ಜಿಲ್ಲಾಧಿಕಾರಿಯವರು ನಿರ್ಧರಿಸಿದ ನಂತರ ಅರ್ಜಿ

ಸ್ವತ್ತುಗಳು/ಕಟ್ಟಡಗಳು/ನಿರ್ಮಿತಿಗಳಲ್ಲಿ ಅವರು ಮಧ್ಯಪ್ರವೇಶಿಸುವುದರಿಂದ ನಿರ್ಬಂಧಪಡಿಸಲಾಗಿದೆ.

ಮೇಲಿನ ಯಾವುದೇ ರಿಟ್ ಅರ್ಜಿಗಳಲ್ಲಿ, ಕಟ್ಟಡಗಳಿಗೆ ನಷ್ಟವುಂಟುಮಾಡುವುದು ಅಥವಾ ಕೆಡವಿಹಾಕುವುದಕ್ಕೆ, ನಷ್ಟಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ನಿರ್ಧರಣೆಯನ್ನು ಕೋರುವ ಮನವಿಯನ್ನು ಸಲ್ಲಿಸಲು ಅದರ ಮಾಲೀಕರಿಗೆ ಸ್ವಾತಂತ್ರ್ಯ ನೀಡುವುದು ಹಾಗೂ ನಷ್ಟಪರಿಹಾರ ಅನುದಾನಕ್ಕೆ, ಮೂರು ತಿಂಗಳುಗಳ ಬಾಹ್ಯಮಿತಿಯೊಳಗೆ ಎದುರುದಾರ-ಜಿಲ್ಲಾಧಿಕಾರಿಯವರನ್ನು ಪರಿಗಣಿಸತಕ್ಕದ್ದು. ಜೊತೆಗೆ ಯಾವುದೇ ಸ್ವರೂಪದ ನಷ್ಟಪರಿಹಾರಕ್ಕೆ ಸಿವಿಲ್ ನ್ಯಾಯಾಲಯದ ಮುಂದೆ ಬಾಧಿತನು ಕೋರಬಹುದು.

ಮೇಲಿನ ವಿಚಾರಣೆಯನ್ನು ನಿರ್ದೇಶಿಸಿದ ತರುವಾಯ, ನಷ್ಟ/ಕೆಡವುದಕ್ಕೆ ಜವಾಬ್ದಾರರಾದ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸತಕ್ಕದ್ದು ಹಾಗೂ ಅರ್ಜಿದಾರರಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಸದರಿ ಅಧಿಕಾರಿಗಳಿಂದ ವಸೂಲಿ ಮಾಡತಕ್ಕದ್ದು. ಅಷ್ಟೇ ಅಲ್ಲದೆ, ಸದರಿ ಅಧಿಕಾರಿಗಳ ಸೇವಾ ದಾಖಲಾತಿಯಲ್ಲಿ ಪ್ರತಿಕೂಲ ಷರಾ ನಮೂದನೆಯನ್ನು ಮಾಡತಕ್ಕದ್ದು.

ನಷ್ಟವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟ ಅನುಪಾಲನಾ ವರದಿ, ಬಾಧಿತರಾದ ಅರ್ಜಿದಾರರಿಗೆ ನೀಡಿದ ನಷ್ಟಪರಿಹಾರ ಸಂದಾಯ, ತಪ್ಪಿತಸ್ಥ ಅಧಿಕಾರಿಗಳಿಂದ ಮಾಡಿದ ಅದರ ವಸೂಲಿ ಹಾಗೂ ಅವರ ಸೇವಾ ದಾಖಲಾತಿಗಳಲ್ಲಿ ಪ್ರತಿಕೂಲ ಷರಾ ನಮೂದು ಮಾಡಿರುವುದನ್ನು ಈ ದಿನದಿಂದ ಲೆಕ್ಕ ಮಾಡಿಕೊಂಡು ನಾಲ್ಕು ತಿಂಗಳುಗಳೊಳಗೆ ಸಲ್ಲಿಸತಕ್ಕದ್ದು.

ಅರ್ಜಿದಾರರ ಪರ : ಶ್ರೀ ಜಿ.ಆರ್. ಪ್ರಕಾಶ್, ವಕೀಲರು.

1-4ರವರೆಗಿನ ಪ್ರತ್ಯರ್ಜಿದಾರರ ಪರ : ಶ್ರೀ ದಿಲ್‌ದಾರ್ ಶಿರಳ್ಳಿ, ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು.

5ನೇ ಪ್ರತ್ಯರ್ಜಿದಾರರ ಪರ: ಶ್ರೀ ರವಿಶಂಕರ್ ಎ., ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್ :**

ಸಕಲೇಶಪುರ ಪಟ್ಟಣ ಪುರಸಭೆ ವ್ಯಾಪ್ತಿ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 48 ಎಂದು ಅಧಿಸೂಚಿಸಲಾಗಿರುವ ಬೆಂಗಳೂರು–ಮಂಗಳೂರು ರಸ್ತೆಯನ್ನು ಸೇರಿಸುವ ಮಾರ್ಗದಲ್ಲಿನ ಅರ್ಜಿ ಸ್ವತ್ತುಗಳು/ಕಟ್ಟಡಗಳ ಕಾನೂನುಬದ್ಧ ಸ್ವಾಧೀನತೆಯಲ್ಲಿ ಎಲ್ಲಾ ಅರ್ಜಿದಾರರು ಸಂಪೂರ್ಣ ಮಾಲೀಕರೆಂದು ಕ್ಲೇಮು ಮಾಡಿದ್ದಾರೆ. ಎದುರುದಾರರು, ಬಾಧಿತರ ಸ್ವತ್ತಿನ ಭಾಗವನ್ನು ಅತಿಕ್ರಮಣ ಮಾಡುವ ಮೂಲಕ ಸಾರ್ವಜನಿಕ ರಸ್ತೆಗಳನ್ನು ನಿರ್ಮಿಸುತ್ತೇವೆಂದು ದರ್ಪದಿಂದ ಆಕ್ರಮಣ ಮಾಡಿಕೊಂಡು, ಅವುಗಳನ್ನು ಕೆಡವುವ ಅಥವಾ ಕೆಡವುತ್ತೇವೆಂದು ಬೆದರಿಸುವ ಎದುರುದಾರರ ಆಪಾದಿತ ಸೊಕ್ಕಿನ ಕೃತ್ಯದ ವಿರುದ್ಧ ಬಾಧಿತರಾಗಿ ಅವರು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

2. ಅಧಿಕಾರಿ ಎದುರುದಾರರು ಹಾಜರಾಗಿ, ಈ ಕೆಲವು ವಿಷಯಗಳಲ್ಲಿ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಿದ್ದು, ಉಳಿದವರೆಲ್ಲರಿಗೂ ಇದನ್ನು ಅಳವಡಿಸಿಕೊಳ್ಳಬೇಕೆಂದು ಮನವಿ ಮಾಡಿದ್ದಾರೆ. ಎದುರುದಾರ–ಪಟ್ಟಣ ಪುರಸಭೆಯು ಸಹ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದೆ. ಈ ಎದುರುದಾರರು, ಅರ್ಜಿ ಕೋರಿಕೆಗಳನ್ನು ನಿರ್ಬಂಧಿಸಿ ವಿವಿಧ ವಾದಗಳನ್ನು ತಮ್ಮ ವಕಾಲತ್ತಿನ ಮೂಲಕ ಕೈಗೆತ್ತಿಕೊಂಡಿದ್ದಾರೆ. ಈ ನ್ಯಾಯಾಲಯವು, ಈ ಹೆಚ್ಚಿನ ವಿಷಯಗಳಲ್ಲಿ ಮಧ್ಯಂತರ ಪರಿಹಾರ ರೂಪದಲ್ಲಿ ಕೆಲವು ಸಂರಕ್ಷಣೆಗಳನ್ನು ನೀಡಿದೆ. ಈ ಎಲ್ಲಾ ವಿಷಯಗಳು ಕಾನೂನು ಮತ್ತು ಸಂಗತಿಯ ಗಣನೀಯ ಸದೃಶ ಪ್ರಶ್ನೆಗಳನ್ನು ಒಳಗೊಂಡಿದ್ದು ಸಮ್ಮತಿಯೊಂದಿಗೆ ಅಂತಿಮ ಸುನಾವಣೆಯನ್ನು ಕೈಗೆತ್ತಿಕೊಳ್ಳಲಾಗಿದ್ದು ಈ ಸಾಮಾನ್ಯ ತೀರ್ಪಿನ ಮೂಲಕ ವಿಲೆ ಮಾಡಲಾಗಿದೆ.

3. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಅವರು ನೋಂದಣಿ ವರ್ಗಾವಣೆಯ ಕಾರಣದಿಂದ ಅರ್ಜಿ ಸ್ವತ್ತುಗಳಿಗೆ ಹಕ್ಕು ಸ್ವಾಮ್ಯವನ್ನು ಹೊಂದಿದ್ದಾರೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ; ಅವರು ಬಹಳ ಹಿಂದೆಯೇ ಸ್ಥಾಪಿಸಲಾಗಿರುವ ನಿರ್ಮಿತಿಗಳಲ್ಲಿ ವಾಸಿಸುತ್ತಿದ್ದಾರೆ ಅಥವಾ ಅವರು ತಮ್ಮ ವ್ಯಾಪಾರ ನಡೆಸುತ್ತಿದ್ದಾರೆ; ಈ ಕೆಲವು ನಿರ್ಮಿತಿಗಳು ಮೇಲುನೋಟಕ್ಕೆ ರಿಟ್ ಅರ್ಜಿಗಳಿಗೆ ಅನುಬಂಧಗಳಂತೆ ಹಾಜರುಪಡಿಸಲಾದ ಅವರ ಛಾಯಾಚಿತ್ರಗಳಿಂದ ಸ್ಪಷ್ಟಪಡಿಸಬಹುದಾದಂತೆ ಹಳೆಯ ಮೌಲ್ಯವನ್ನು ಹೊಂದಿದ್ದು, ಅವುಗಳ ದೃಢೀಕರಣ ಪ್ರಶ್ನೆಯಲ್ಲಿರುವುದಿಲ್ಲ; ಹೀಗಿರುವಾಗ, ಎದುರುದಾರ ಉಪ–ವಿಭಾಗಾಧಿಕಾರಿಯವರು, ಎದುರುದಾರ ಪಟ್ಟಣ ಪುರಸಭೆಯ ಅಧಿಕಾರಿಗಳೊಂದಿಗೆ ಕೈಜೋಡಿಸಿ ಸಂಬಂಧಪಟ್ಟ ರಸ್ತೆಯ ಅಗಲೀಕರಣದ ಸೋಗಿನಲ್ಲಿ ಪ್ರಶ್ನಿತ ಕಟ್ಟಡಗಳನ್ನು ಉರುಳಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಿರುತ್ತಾರೆ ಎಂದು ನಿವೇದಿಸಿದ್ದಾರೆ.

4. ರಿಟ್ ಅರ್ಜಿ ಸಂಖ್ಯೆ: 32285–32292/2018ರಲ್ಲಿರುವ ಅರ್ಜಿದಾರರು ಹಾಗೂ ಸಂಬಂಧಿತ ವಿಷಯಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಪವನ್ ಚಂದ್ರಶೆಟ್ಟಿ, ಎದುರುದಾರ–ಉಪವಿಭಾಗಾಧಿಕಾರಿಗಳು ಅಲ್ಲಿರುವ ಅಧಿಕಾರಶಾಹಿಗಳೊಟ್ಟಿಗೆ ಕೈಜೋಡಿಸಿದ್ದು ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದೆಂದು ತಾವು ಮಾಡಿದ ವಿನಮ್ರ ಮನವಿಯನ್ನು ಬದಿಗೊತ್ತಿ ಹಾಗೂ ಆರೋಪಿತ ಆಕ್ರಮಣವನ್ನು ಕಾನೂನಿನ ಮುಕ್ತ ಪ್ರಕ್ರಿಯೆಯ ಮೂಲಕ ನಿರ್ಣಯಿಸದೆ, ಅನುಬಂಧಗಳಲ್ಲಿರುವ ನಿರ್ವಿವಾದಿತ ಛಾಯಾಚಿತ್ರಗಳಲ್ಲಿ ಕಂಡುಬರುವಂಥ ಅರ್ಜಿದಾರರ ಕಟ್ಟಡಗಳ ಮುಂದಿನ ಭಾಗವನ್ನು ದರ್ಪದಿಂದ ಕೆಡವಿ ಹಾಕಿದ್ದಾರೆಂದು ಭಾವಾವೇಶಪೂರಿತವಾಗಿ ನಿವೇದಿಸಿದ್ದಾರೆ. ಆದುದರಿಂದ, ಮಾನ್ಯ ವಕೀಲರು, ಕೆಡವಿಹಾಕುವ ಬೆದರಿಕೆಯ ವಿರುದ್ಧದ ನಿರ್ಬಂಧಕಾದೇಶ ಪರಿಹಾರವನ್ನು ಹಾಗು ಕಾನೂನಿನ ಒಟ್ಟಾರೆ ಉಲ್ಲಂಘನೆಯಲ್ಲಾದ ನಷ್ಟಕ್ಕೆ ನಷ್ಟಭರ್ತಿ ಪರಿಹಾರವನ್ನು ಕೋರಿದ್ದಾರೆ.

5. ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯಾಲಯ ಸರ್ಕಾರಿ ವಕೀಲರಾದ ಶ್ರೀ ದಿಲ್‌ದಾರ್ ಶಿರಾಲಿಯವರು ಹಾಗೂ ಅಧಿಕೃತ ಎದುರುದಾರರು, ಹಾಗೆಯೇ ಪಟ್ಟಣ ಪುರಸಭೆಯ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯದರ್ಶಿಗಳ ಪಟ್ಟಿಯಲ್ಲಿರುವ ವಕೀಲರಾದ ಶ್ರೀ ರವಿಶಂಕರ್‌ರವರು, ಪ್ರಶ್ನಿತ ನಿರ್ಮಿತಿಗಳನ್ನು ಸ್ಪಷ್ಟವಾಗಿ ಅತಿಕ್ರಮಿಸಲಾಗಿದೆಯೆಂದು; ದಿನಾಂಕ: 18.02.1976, ಸಂಖ್ಯೆ: ಪಿಡಬ್ಲ್ಯೂಡಿ 43 ಸಿಆರ್‌ಎಂ 75ನ್ನು ಹೊಂದಿರುವ ಸರ್ಕಾರಿ ಆದೇಶವು, ಭಾರತೀಯ ರಸ್ತೆ ಕಾಂಗ್ರೆಸ್ ಅಂಕಿ–ಅಂಶ ಮೌಲ್ಯಗಳ ಪರಿಭಾಷೆಯಲ್ಲಿ, ನಿರ್ದಿಷ್ಟವಾಗಿ, ರಾಷ್ಟ್ರೀಯ ಹೆದ್ದಾರಿಯ ಮಧ್ಯದಿಂದ ಅದರ ಎರಡೂ ಬದಿಗಳಲ್ಲಿ 40 ಮೀಟರ್‌ಗಳವರೆಗೆ ಯಾವುದೇ ನಿರ್ಮಿತಿಗಳನ್ನು ನಿರ್ಮಿಸಬಾರದೆಂಬುದನ್ನು ದಿನಾಂಕ: 09.05.1988 ಸಂಖ್ಯೆ: ಪಿಡಬ್ಲ್ಯೂಡಿ 46 ಸಿಎನ್‌ಎಚ್ 88ನ್ನು ಹೊಂದಿರುವ ಸರ್ಕಾರಿ ಸುತ್ತೋಲೆ ಇದರ ಜೊತೆಗೆ ಇತರ ರಾಷ್ಟ್ರೀಯ ಹೆದ್ದಾರಿಗಳ ನಡುವಿನ ಅಳತೆಗಳನ್ನು ಸೂಚಿಸಿದ್ದು, ಅದರ ಎರಡೂ ಬದಿಗಳಲ್ಲಿನ ನಿರ್ಮಿತಿಗಳ ನಿರ್ಮಾಣಕ್ಕೆ ಸಂಬಂಧಿಸಿದ ನಿಷೇಧಿತ ವ್ಯಾಪ್ತಿಗಳನ್ನು ಸೂಚಿಸಿದೆಯೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ.

6. ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ಹಾಗೂ ವಿಭಾಗ ವಕೀಲರುಗಳಿಬ್ಬರೂ, ರಸ್ತೆಗಳ ಗಡಿರೇಖೆಯಿಂದ ಎರಡೂ ಬದಿಯಲ್ಲಿ ಆರು ಮೀಟರುಗಳವರೆಗೆ ಶಾಸನಬದ್ಧ ಮಾದರಿ ಸೂತ್ರಗಳ ಪ್ರಕಾರ ಯಾವುದೇ ನಿರ್ಮಿತಿಗಳನ್ನು ನಿರ್ಮಿಸಬಾರದಾಗಿತ್ತು ಎಂದು ನಿವೇದಿಸಿದ್ದಾರೆ; ಈ ಮಾದರಿ ಸೂತ್ರಗಳನ್ನು ಉಲ್ಲಂಘಿಸಿರುವುದಷ್ಟೇ ಅಲ್ಲದೆ ಅದರ ರಾಷ್ಟ್ರೀಯ ಹೆದ್ದಾರಿಗಳ ಬದಿಗಳಲ್ಲಿ ಕೂಡ ಅತಿಕ್ರಮಿಸಬಾರದಾಗಿತ್ತು, ಇದರ ಪರಿಣಾಮವಾಗಿ, ಅತಿಯಾದ ಒತ್ತಾಯವೇರ್ಪಟ್ಟಿದೆ; ರಾಷ್ಟ್ರೀಯ ಹೆದ್ದಾರಿಯ ಈ ನಿರ್ಮಿತಿಯು ಕೆಲವು ವಾಹನಸಂಬಂಧಿ ಅಪಘಾತಗಳು ಹಲವಾರು ಪ್ರಾಣಾಂತಿಕ ಅಪಘಾತಗಳಿಗೆ ಕಾರಣವಾಗಿವೆ. ಅರ್ಜಿಗಳನ್ನು ಸಲ್ಲಿಸುವುದಕ್ಕೆ ಸುಮಾರು ಮೂರುವರೆ ವರ್ಷಗಳ ಅಲ್ಪಾವಧಿಯಲ್ಲಿ 190 ಅಪಘಾತಗಳಾಗಿದ್ದು, 16 ಮುಗ್ಧ ನಾಗರಿಕರ ಸಾವು ಸಂಭವಿಸಿದೆ; ಐತಿಹಾಸಿಕವಾಗಿರುವ ಪಟ್ಟಣಕ್ಕೆ ಪ್ರಯಾಣಿಕರು ಹರಿದು ಬರುತ್ತಾರೆ; ಪಾದಾಚಾರಿಗಳಿಗೂ ಕೂಡ ಹೆಚ್ಚಿನ ತೊಂದರೆಯಾಗಿದೆ. ರಸ್ತೆಯ ಎರಡೂ ಬದಿಯ

ಕಾಲುಹಾದಿಯಷ್ಟನ್ನೂ ಅನಧಿಕೃತ ಕಟ್ಟಡಗಳಿಂದ ಅತಿಕ್ರಮಿಸಲಾಗಿದೆ. ಆದುದರಿಂದ ಅರ್ಜಿದಾರರಿಗೆ ಹೊಂದಿಕೆಯಾಗುವುದಿಲ್ಲವೆಂದು ನಿವೇದಿಸಿದ್ದಾರೆ. ವಿವಾದಿತ ಸಂಗತಿಗಳ ಪ್ರಶ್ನೆಗಳಿಂದ ಕೂಡಿದ್ದು, ಅರ್ಜಿದಾರರು ಪರ್ಯಾಯವನ್ನು ಹೊಂದಿರುವರು ಹಾಗೂ ಯುಕ್ತವಾಗಿ ರೂಪಿಸಲಾದ ದಾವೆಯ ಮೂಲಕ ಪರಿಣಾಮಕಾರಿಯಾದ ಪರಿಹಾರವನ್ನು ಹೊಂದುವರೆಂಬ ಆಧಾರದ ಮೇಲೆ ಅರ್ಜಿಗಳನ್ನು ವಜಾಗೊಳಿಸುವ ಸಂಬಂಧ ವಾದ ಮಂಡಿಸಿದ್ದಾರೆ.

7. ನಾನು ಅರ್ಜಿದಾರರ ಪರವಾಗಿ ಹಾಜರಾಗಿದ್ದ ಮಾನ್ಯ ಎಲ್ಲಾ ವಕೀಲರ ವಾದಗಳನ್ನು ಆಲಿಸಿದ್ದು, ನಾನು ರಾಜ್ಯದ ಪರವಾದ ಉಚ್ಚ ನ್ಯಾಯಾಲಯದ ಮಾನ್ಯ ಸರ್ಕಾರೀ ವಕೀಲರ ವಾದಗಳನ್ನು ಇತರ ಅಧಿಕೃತ ಎದುರುದಾರರ ವಾದಗಳನ್ನು ಹಾಗೂ ಪಟ್ಟಣ ಪುರಸಭೆಯ ಮಾನ್ಯ ವಿಭಾಗ ವಕೀಲರ ವಾದಗಳನ್ನೂ ಸಹ ಆಲೀಸಿರುತ್ತೇನೆ. ನಾನು ಅರ್ಜಿ ಪತ್ರಗಳನ್ನು ಹಾಗೂ ಆಕ್ಷೇಪಣಾ ವಿವರಣೆಗಳನ್ನು ಅವಗಾಹಿಸಿದ್ದೇನೆ.

8. ಅರ್ಜಿದಾರರು ತಾವು ಅರ್ಜಿ ನಿರ್ಮಿತಿಗಳ ಮಾಲೀಕರಾಗಿದ್ದೇವೆಂಬುದು ಅವರ ವಾದವಾಗಿದೆ ಅವುಗಳನ್ನು, ತಮ್ಮ ಖಾಸಗಿ ಸ್ವತ್ತುಗಳಲ್ಲಿ ಕೆಲವು ದಶಕಗಳ ಹಿಂದೆ ಕಾನೂನಿನ ಪ್ರಕಾರ ನಿರ್ಮಿಸಿದ್ದು, ಅದನ್ನು ಎದುರು ವಕೀಲರು ಸರಿಯಾಗಿ ವಾದಿಸಲಾದಂತೆ ರಿಟ್ ಅಧಿಕಾರವ್ಯಾಪ್ತಿಯಲ್ಲಿ ನಿರ್ಧರಿಸುವುದು ಕಷ್ಟಕರವಾಗಿದೆ ಎಂಬುದು ಅವರ ವಾದವಾಗಿದೆ. ಆದರೆ, ಮೇಲುನೋಟಕ್ಕೆ ನೋಂದಣಿ ವರ್ಗಾವಣೆ ಪತ್ರಗಳ ರೂಪದಲ್ಲಿರುವ ಸಾಕ್ಷ್ಯಾಧಾರ, ಪಟ್ಟಣ ಪುರಸಭೆ ದಾಖಲೆಗಳು ಹಾಗೂ ತೆರಿಗೆ ರಸೀದಿಗಳು ಕೆಲವು ನಿರ್ಮಿತಿಗಳ ಮೇಲೆ ಅರ್ಜಿದಾರರು ಒಡೆತನವನ್ನು ಕ್ಲೇಮು ಮಾಡಿರುವರು ಎಂಬುದನ್ನು ತೋರಿಸುತ್ತವೆ; ಎದುರುದಾರರ ವಾದಗಳನ್ನು ಪರಿಶೀಲಿಸಿದರೆ, ಅಧಿಕಾರಿ ಎದುರುದಾರರು, ಈ ನಿರ್ಮಿತಿಗಳನ್ನು ಅತಿಕ್ರಮಣ ಮಾಡಿಕೊಂಡ ತರುವಾಯ ಸಾರ್ವಜನಿಕ ರಸ್ತೆಯಲ್ಲಿ ನಿರ್ಮಿಸಲಾಗಿದೆ ಎನ್ನುವ ಆಧಾರದ ಮೇಲೆ ಕೆಡವುವ ಬೆದರಿಕೆಯನ್ನು ಹಾಕಿರುವುದು ಸ್ಪಷ್ಟವಾಗಿ

ತೋರಿಬರುತ್ತದೆ. ವಾಸ್ತವವಾಗಿ, ಎದುರುದಾರರ ವಾದದ ಪ್ರಮುಖ ಉದ್ದೇಶ ಅತಿಕ್ರಮಿಸುವುದಾಗಿದೆ.

9. ಶ್ರೀ ಪವನ್ ಚಂದ್ರಶೆಟ್ಟಿಯವರ ವಾದವು ಅವರ ಅರ್ಜಿಗಳಲ್ಲಿನ ಎಂದರೆ ರಿಟ್ ಅರ್ಜಿ ಸಂಖ್ಯೆ: 32285–32292/2018, ರಿಟ್ ಅರ್ಜಿ ಸಂಖ್ಯೆ: 35708–35709/2018ರಲ್ಲಿರುವ ಹಾಗೂ ಸಂಬಂಧಪಟ್ಟ ವಿಷಯಗಳಲ್ಲಿರುವ ಸಂಬಂಧಪಟ್ಟ ನಿರ್ಮಿತಿಗಳನ್ನು ಎದುರುದಾರ–ಉಪವಿಭಾಗಾಧಿಕಾರಿಯವರು ಜೆಸಿಬಿ ವಾಹನಗಳನ್ನು ಬಳಸುವ ಮೂಲಕ ದರ್ಪದ ಕೃತ್ಯವೆಸಗುವ ಮೂಲಕ ವ್ಯಾಪಕವಾಗಿ ನಷ್ಟವನ್ನುಂಟು ಮಾಡಿರುವರು ಎಂಬುದಾಗಿದ್ದು, ಅನುಬಂಧಗಳಲ್ಲಿರುವಂತೆ ಹಾಜರುಪಡಿಸಲಾದ ನಿರ್ವಿವಾದಿತ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ ನಿಜವಾಗಿರುವುದು ಕಂಡುಬರುತ್ತದೆ. ಈ ವಾದವು, ನಂಬಿಕೆಯನ್ನು ಹುಟ್ಟಿಸುತ್ತದೆ, ಎದುರುದಾರ ರಾಜ್ಯ ಹಾಗೂ ಅದರ ಅಧಿಕಾರಿಗಳು ಆಕ್ಷೇಪಣೆಗಳ ವಿವರಣೆಯಲ್ಲಿನ ವಾದವನ್ನು ನಿರಾಕರಣೆಯ ರೀತಿಯಲ್ಲಿ ಕೈಗೆತ್ತಿಕೊಂಡಿಲ್ಲ. ಅದೇನೇ ಇದ್ದರೂ, ಈ ವಿಷಯವು ಸತ್ಯವನ್ನು ಶೋಧಿಸಲು ಹಾಗೂ ಇದರ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜವಾಬ್ದಾರಿಯನ್ನು ಹಿಡಿದಿಡಲು ಆಳವಾದ ತನಿಖೆಯನ್ನು ಅಗತ್ಯಪಡಿಸುತ್ತದೆ.

10. ಅರ್ಜಿದಾರರು ತಮ್ಮ ಕಟ್ಟಡಗಳು ತಮಗೆ ನೆಲೆಯಾಗಿದ್ದು, ಇದರಲ್ಲಿ ತಾವು ವಾಸಿಸುತ್ತಿದ್ದು ತಮ್ಮ ವ್ಯವಹಾರ/ವ್ಯಾಪಾರವನ್ನು ನಡೆಸುತ್ತಿದ್ದೇವೆ ಎಂಬುದು ಅವರ ವಾದವಾಗಿದೆ ಹಾಗೂ ಕಟ್ಟಡಗಳನ್ನು ಉರುಳಿಸುವ ಹಾಗೂ ಉರುಳಿಸುವ ಬೆದರಿಕೆಯನ್ನು ಹಾಕುವುದು ಭಾರತ ಸಂವಿಧಾನದ 19(1)(ಜಿ), 21 ಹಾಗೂ 300ಎ ಅನುಚ್ಛೇದಗಳ ಮೇರೆಗಿನ ತಮ್ಮ ಮೂಲಭೂತ ಹಕ್ಕನ್ನು ಉಲ್ಲಂಘಿಸುವುದಾಗಿದ್ದು, ಉತ್ತರಿಸುವ ಎದುರುದಾರರು ದರ್ಪದ ಕೃತ್ಯವೆಸಗದಿದ್ದರೆ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಿತ್ತು ಎಂಬುದು ಅವರ ವಾದವಾಗಿದೆ. ನಾಗರಿಕರು ತಮ್ಮ ಮನೆಯಲ್ಲಿ ಪ್ರಸ್ತುತ ವಾಸಮಾಡುತ್ತಿರುವುದಕ್ಕೆ ತೊಂದರೆ ನೀಡಿದರೆ ವೈಯಕ್ತಿಕ ಸ್ವಾತಂತ್ರದ ಹಕ್ಕನ್ನು ಹರಣಗೊಳಿಸಿದಂತಾಗುತ್ತದೆ; ಕೆಡವುವುದು ಅಥವಾ ಕೆಡವಲು ಬೆದರಿಕೆ ಹಾಕುವುದು, 19ನೇ ಅನುಚ್ಛೇದದ ಮೇರೆಗೆ ಖಾತರಿ

ನೀಡಲಾದಂಥ ಅವರ ವ್ಯವಹಾರ/ವ್ಯಾಪಾರವನ್ನು ನಡೆಸುವ ನಾಗರಿಕರ ಹಕ್ಕನ್ನು ಕಸಿದುಕೊಂಡಂತಾಗುತ್ತದೆ; ಅರ್ಜಿದಾರರ ನಿರ್ಮಿತಿಗಳನ್ನು ಅತಿಕ್ರಮಣದ ಆಧಾರದಲ್ಲಿ ಬಲವಂತವಾಗಿ ಕಿತ್ತುಕೊಳ್ಳಲು ಬಯಸಿದರೆ, ಇದು ಸರ್ಕಾರವು ಯುಕ್ತ ಪ್ರಕ್ರಿಯೆಯ ಮೂಲಕ ಸ್ಥಾಪಿಸಿದ ಹಕ್ಕಿನ ಗೈರುಹಾಜರಿಯಲ್ಲಿ 300ಎ ಅನುಚ್ಛೇದವನ್ನು ಉಲ್ಲಂಘಿಸಿದಂತಾಗುತ್ತದೆ.

11. ಕರ್ನಾಟಕ ಪಟ್ಟಣಪುರಸಭೆ ಅಧಿನಿಯಮ, 1976ರ 8ನೇ ಪ್ರಕರಣವು ಮುನಿಸಿಪಲ್ ವ್ಯಾಪ್ತಿಯೊಳಗೆ ಬರುವ ಸಾರ್ವಜನಿಕ ಸ್ವತ್ತುಗಳ ಅತಿಕ್ರಮಣವನ್ನು ನಿವಾರಿಸುವ ಪ್ರಕ್ರಿಯೆ ಹಾಗೂ ಆಡಳಿತ ವ್ಯವಸ್ಥೆಯ ಬಗ್ಗೆ ಉಪಬಂಧಿಸುತ್ತದೆ. ರಿಟ್ ಅರ್ಜಿ ಸಂಖ್ಯೆಗಳು 26662–666/2012 (ಜಿಎಂ–ಆರ್‌ಇಎಸ್)ರಲ್ಲಿ ದಿನಾಂಕ: 03.08.2012ರ ತೀರ್ಪಿನ ಪ್ರಕಾರ ಈ ನ್ಯಾಯಾಲಯದ ಸಮನ್ವಯ ಪೀಠವು ಬಹುತೇಕ ಸದೃಶ ಸಂಗತಿಗಳ ಗುಚ್ಛದಲ್ಲಿ, ಕಾನೂನಿನ ಯುಕ್ತ ಪ್ರಕ್ರಿಯೆಯನ್ನು ಹೊರತುಪಡಿಸಿ ಆಕ್ರಮಣಗಳನ್ನು ತೆಗೆದುಹಾಕಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ. ಮತ್ತೊಂದು ಸಮನ್ವಯ ಪೀಠವು ದಿನಾಂಕ: 11.01.2018ರ ರಿಟ್ ಅರ್ಜಿ ಸಂಖ್ಯೆ:32351–32354/2017 (ಎಲ್‌ಬಿ–ಆರ್‌ಇಎಸ್)ನಲ್ಲಿ ತನ್ನ ಇತ್ತೀಚಿನ ತೀರ್ಪಿನಲ್ಲಿ, ಅಧಿನಿಯಮದ ಉಪಬಂಧಗಳ 9 ಹಾಗೂ 10ನೇ ಕಂಡಿಕೆಗಳಲ್ಲಿ ಅರ್ಥವಿವರಣೆ ನೀಡಿರುವ ಸಂಬಂಧಪಟ್ಟ ವಿಷಯಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ.

> "9. ಹಿಂದೆ ಹೇಳಲಾದ ಕಾರಣದಿಂದ, ಅರ್ಜಿದಾರರು ನಿರ್ಮಿಸಿದ ಸ್ವತ್ತುಗಳಿಗೆ ಹಕ್ಕಿನ ಹಾಗೂ ಅಂಥ ಹಕ್ಕಿನ ಎಲ್ಲೆಗೆ ಸಂಬಂಧಿಸಿದ ಅವರಿಗೆ ಸಂಬಂಧಪಟ್ಟ ಅವರ ಸಾಕ್ಷ್ಯದೊಂದಿಗೆ ಇಂದಿನಿಂದ ಎರಡು ವಾರಗಳ ಅವಧಿಯೊಳಗೆ ಹಾಸನದ ಸಂಬಂಧಪಟ್ಟ ಜಿಲ್ಲಾಧಿಕಾರಿಯ ಮುಂದೆ ತಮ್ಮ ಮನವಿಗಳನ್ನು ಸಲ್ಲಿಸಬಹುದಾಗಿದೆ ಹಾಗೂ ಅರ್ಜಿದಾರರಿಗೆ ಹಾಗೂ ಎದುರುದಾರ–ಟಿಎಂಸಿಗೆ ಸುನಾವಣೆಯ ಯುಕ್ತ ಅವಕಾಶವನ್ನು

ನೀಡಿದ ತರುವಾಯ, ಜಿಲ್ಲಾಧಿಕಾರಿ ಹಾಸನ, ಇವರು ಹಿಂದೆ ಹೇಳಲಾದ ಅಧಿನಿಯಮದ 82ನೇ ಪ್ರಕರಣಕ್ಕೆ ಅನುಸಾರವಾಗಿ ಪ್ರಶ್ನೆಗಳನ್ನು ನಿರ್ಣಯಿಸಲು ನಿರ್ದೇಶಿತರಾಗಿರುವರು.

10. ಅಂಥ ನ್ಯಾಯನಿರ್ಣಯ ಮಾಡುವವರೆಗೆ, ಎದುರುದಾರ–ಟಿಎಂಸಿ, ಅರ್ಜಿದಾರರ ಸ್ವತ್ತುಗಳನ್ನು ಉರುಳಿಸುವುದನ್ನು ಕೈಗೆತ್ತಿಕೊಂಡ ಮೇಲೆ ರಸ್ತೆಯನ್ನು ಅಗಲೀಕರಣಗೊಳಿಸುವ ಸಂಬಂಧ ಯಾವುದೇ ಬಲವನ್ನು ಬಳಸಲಾಗುವುದಿಲ್ಲ. ಆದಾಗ್ಯೂ, ಜಿಲ್ಲಾಧಿಕಾರಿಯು, ಅರ್ಜಿದಾರರು, ಸಾರ್ವಜನಿಕ ಭೂ ಸ್ವತ್ತನ್ನು ಅತಿಕ್ರಮಣ ಮಾಡಿಕೊಂಡಿರುವರೆಂಬುದನ್ನು ಗುರುತಿಸಿದರೆ ಹಾಗೂ ಸಾರ್ವಜನಿಕ ಭೂ ಸ್ವತ್ತಿನಲ್ಲಿ ಕಟ್ಟಡಗಳನ್ನು ಎತ್ತಿರುವರೆಂದು ಗುರುತಿಸಿದರೆ ಅರ್ಜಿದಾರರ ಸ್ವತ್ತುಗಳನ್ನು ಕೆಡವಲು ಹೊಣೆಗಾರರಾಗುವ ಮಟ್ಟಿಗೆ ಅಷ್ಟೇ ಅಲ್ಲದೆ, ಜಿಲ್ಲಾಧಿಕಾರಿಯವರೂ ಕೂಡ ವಿಧಿಸಬಹುದು ಹಾಗೂ ಅರ್ಜಿದಾರರಿಂದ ಅಥವಾ ಇತರ ಸಾರ್ವಜನಿಕ ಭೂಸ್ವತ್ತಿನ ಅರ್ಜಿದಾರರಿಂದ ವಸೂಲಿ ಮಾಡಬೇಕಾದ ಯುಕ್ತ ನಷ್ಟಗಳನ್ನು ಸಹ ವಸೂಲಿ ಮಾಡಬಹುದು. ಎದುರುದಾರ ಸಂಖ್ಯೆ:2 ಜಿಲ್ಲಾಧಿಕಾರಿ, ಹಾಸನ ಇವರು ಈ ನ್ಯಾಯನಿರ್ಣಯ ಪ್ರಕ್ರಿಯೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಬೇಕೆಂದು ಹಾಗೂ ರಸ್ತೆಯನ್ನು ಅಗಲೀಕರಣಗೊಳಿಸುವುದು ಹೆಚ್ಚಿನ ಸಾರ್ವಜನಿಕ ಮಹತ್ವದ ಸರ್ಕಾರಿ ಯೋಜನೆಯಾಗಿರುವ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇಂದಿನಿಂದ ಎರಡು ತಿಂಗಳುಗಳ ಅವಧಿಯೊಳಗೆ ಇದನ್ನು ಪೂರ್ಣಗೊಳಿಸಲು ಹಾಗೂ ಅಂಥ ನ್ಯಾಯನಿರ್ಣಯ ಮಾಡಬೇಕಾದ ಕಾರಣದಿಂದ, ಅಂಥ ಯೋಜನೆಯನ್ನು ಅನಗತ್ಯವಾಗಿ ಹಾಗೂ ಅನುಚಿತವಾಗಿ ಹೆಚ್ಚಿನ ವಿಳಂಬ ಮಾಡಬಾರದೆಂಬುದನ್ನು ನಿರೀಕ್ಷಿಸಲಾಗಿದೆ”.

12. ದಿನಾಂಕ: 03.03.2011ರ ತೀರ್ಪಿನ ಪ್ರಕಾರ ನ್ಯಾಯಾಲಯದ ಮತ್ತೊಂದು ಸಮನ್ವಯ ಪೀಠವು, ಸನ್ನಿವೇಶಗಳ ಸದೃಶ ಗುಚ್ಛ ರಿಟ್ ಅರ್ಜಿ ಸಂಖ್ಯೆ: 36313/ 2010 (ಎಲ್ಎ–ಆರ್ಇಎಸ್)ನಲ್ಲಿ ಬೀರೂರು ಪಟ್ಟಣದ ವಾದಿಗಳು ಬಾಧಿತರಾಗಿರುವುದನ್ನು ಪರಿಗಣಿಸಲಾಗಿದ್ದು, ಪರಿಹಾರವನ್ನು ಮಂಜೂರು ಮಾಡಲಾಗಿದ್ದು, "ಯಾವುದೇ ರೀತಿಯಲ್ಲಿ, ಎದುರುದಾರ ಪ್ರಾಧಿಕಾರಿಗಳು, ಬೀರೂರು ಪಟ್ಟಣದ ಮೂಲಕ ಹಾದುಹೋಗುವ ರಾಜ್ಯ ಹೆದ್ದಾರಿಯನ್ನು ಅಗಲೀಕರಣಗೊಳಿಸುವ ಉದ್ದೇಶಕ್ಕಾಗಿ, ಅನುಸೂಚಿತ ಸ್ವತ್ತುಗಳ್ನು ಅಗತ್ಯಪಡಿಸಿದರೆ, ಆಗ ಅದನ್ನು ಕಾನೂನಿನ ಪ್ರಕಾರ ಆರ್ಜಿಸಬೇಕಾಗುತ್ತದೆ" . . . ಎಂದು ಅಭಿಪ್ರಾಯಪಡಲಾಗಿದೆ. ಅರ್ಜಿದಾರರು ರಸ್ತೆಯನ್ನು ಅತಿಕ್ರಮಿಸಿದ್ದರೆ, ಆಗ ಅಂಥ ಸಂದರ್ಭದಲ್ಲಿಯೂ ಕೂಡ, ಎದುರುದಾರ ಪ್ರಾಧಿಕಾರಿಗಳು, ಕಾನೂನಿನ ಪ್ರಕಾರ ಅತಿಕ್ರಮಣವನ್ನು ತೆಗೆದುಹಾಕಬೇಕಾಗುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಆದುದರಿಂದ, ರಾಜ್ಯ ಹೆದ್ದಾರಿಗಳನ್ನು ಅಗಲೀಕರಣಗೊಳಿಸುವ ಉದ್ದೇಶಕ್ಕಾಗಿ ಅರ್ಜಿದಾರರು ಏನಾದರೂ ಇದ್ದರೆ ಅರ್ಜಿದಾರರಿಗೆ ಸೇರಿದ ಸ್ವತ್ತುಗಳನ್ನು ಆರ್ಜಿಸುವುದಕ್ಕಾಗಲಿ ಅಥವಾ ಅತಿಕ್ರಮಣವನ್ನು ತೆಗೆದುಹಾಕುವುದಕ್ಕಾಗಲಿ, ಕಾನೂನಿನ ಪ್ರಕಾರ ಕಠಿಣವಾಗಿ ಕಾರ್ಯನಿರ್ವಹಿಸಬೇಕು ಹಾಗೂ ಕೆಡವುವ ಯಾವುದೇ ನೇರ ಕ್ರಮವನ್ನು ಪ್ರಾರಂಭಿಸಲಾಗುವುದಿಲ್ಲ ಎಂಬುದನ್ನು ಗಮನಿಸುವುದು ಅಗತ್ಯವಾಗಿದೆ. ವಾಸ್ತವವಾಗಿ, ಸಂಗತಿಗಳ ಸದೃಶ ಗುಚ್ಛದಲ್ಲಿ ಸಕಲೇಶಪುರ ಪಟ್ಟಣ ಪುರಸಭೆಯಿಂದ ಎತ್ತಿರುವ ಅರ್ಜಿ ಸಂಖ್ಯೆ: 28704–714/2010 (ಎಲ್ಎಆರ್ಇಎಸ್) ನಲ್ಲಿ, ಮತ್ತೊಂದು ಪೀಠವು, ಮೇಲೆ ಸೂಚಿಸಲಾದ ಸದರಿ ಅಭಿಪ್ರಾಯೋಕ್ತಿಗಳ ಪರಿಭಾಷೆಯಲ್ಲಿ ವಾದಿಗಳಿಗೆ ನಷ್ಟಪರಿಹಾರವನ್ನು ನೀಡಿರುವ ದಿನಾಂಕ: 21.06.2011ರ ತೀರ್ಪನ್ನು ನೀಡಿರುತ್ತದೆ. ಕಾನೂನಿನ ಈ ಪರಿಚಿತ ಮಾರ್ಗವನ್ನು ಬದಲಾಯಿಸಲು ಯಾವುದೇ ಮಾರ್ಗವಿಲ್ಲ.

13. ಶ್ರೀ ಪವನ್ ಚಂದ್ರಶೆಟ್ಟಿಯವರು ವಾದಿಸಿರುವ ಈ ಹಿಂದೆ ಹೇಳಲಾದ ರಿಟ್ ಅರ್ಜಿಗಳಲ್ಲಿ, ಇದರಲ್ಲಿರುವ ಕೆಲವು ಅರ್ಜಿದಾರರ ಕೆಲವು ಸ್ವತ್ತುಗಳನ್ನು ಜೆಸಿಬಿ ಯಂತ್ರ ಬಳಸುವ ಮೂಲಕ ಹಾನಿಗೊಳಿಸಲಾಗಿದೆಯೆನ್ನುವ ಅಭಿಪ್ರಾಯದ

ರೂಪಕ್ಕೆ ಮೊದಲ ನೋಟದ ಯಾವುದೇ ಸಾಕ್ಷ್ಯಾಧಾರವಿರುವುದಿಲ್ಲ. ಸ್ಪಷ್ಟವಾಗಿ ಎದುರುದಾರ ರಾಜ್ಯ ಅಧಿಕಾರಿವರ್ಗದವರಲ್ಲದೆ ಬೇರೆ ಯಾರೂ ಇದನ್ನು ಮಾಡಲು ಸಾಧ್ಯವಿಲ್ಲ. ಇದನ್ನು ಕಾನೂನಿನ ನಿಯಮವನ್ನು ಎತ್ತಿಹಿಡಿಯಬೇಕಾದ ರಾಜ್ಯ ಅಧಿಕಾರಿಗಳ ಕಡೆಯವರ ದರ್ಪದ ಕೆಲಸವೇ ಹೊರತು ಬೇರೇನೂ ಅಲ್ಲ. ಹೆಚ್ಚು ಕಡಿಮೆ ಸದೃಶ ವಾಸ್ತವಿಕ ಅಂಕಿಅಂಶಗಳಲ್ಲಿ, ರಿಟ್ ಅರ್ಜಿ ಸಂಖ್ಯೆ: 7687/2011 (ಎಲ್‌ಬಿ–ಆರ್‌ಇಎಸ್)ಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು, ದಿನಾಂಕ: 21.09.2012ರಂದು 10ನೇ ಕಂಡಿಕೆಯಲ್ಲಿ ತೀರ್ಪನ್ನು ನೀಡಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

> "10. ಇದರ ಪರಿಣಾಮವಾಗಿ, ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ. ಪ್ರಶ್ನಿತ ಸ್ಥಿರಾಸ್ತಿಯನ್ನು ಅರ್ಜಿದಾರರು ಸ್ವಾಧೀನಪಡಿಸಿಕೊಂಡಿರುವುದರಲ್ಲಿ ಹಸ್ತಕ್ಷೇಪ ಮಾಡಿರುವುದನ್ನು ಸಹಿಸಿಕೊಳ್ಳಲು ಎದುರುದಾರರಿಗೆ ನಿರ್ದೇಶಿಸಲಾಗಿದೆ ಹಾಗೂ ಕೆಡವಿರುವುದಕ್ಕೆ ಸಮಾನವಾದ ಅಳತೆಯಿರುವ ಪ್ರಶ್ನಿತ ನಿವೇಶನದಲ್ಲಿರುವ ಕಟ್ಟಡದ ನಿರ್ಮಾಣಗಳನ್ನು ನಿರ್ಮಿಸಲು ನಿರ್ದೇಶಿಸಲಾಗಿದೆ. ಕಂದಾಯ ಇಲಾಖೆಯ ಕಾರ್ಯದರ್ಶಿಯವರಿಗೆ 2ನೇ ಎದುರುದಾರರು ಉತ್ತರಿಸಬಹುದಾಗಿದ್ದು ಹಾಗೂ ನಗರಾಭಿವೃದ್ಧಿ ಕಾರ್ಯದರ್ಶಿಯವರಿಗೆ 3ನೇ ಎದುರುದಾರರು ಉತ್ತರಿಸ ಬಹುದಾಗಿದ್ದು, ಇವರು, ಕಟ್ಟಡಗಳನ್ನು ಕೆಡವಿದ್ದ ಅಧಿಕಾರಿಗಳ ಖರ್ಚಿನಲ್ಲಿ ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವುದನ್ನು ಖಚಿತಪಡಿಸಲು ಇವರಿಗೆ ನಿರ್ದೇಶಿಸಲಾಗಿದ್ದು, ಸರ್ಕಾರಿ ಬೊಕ್ಕಸದಿಂದ ಪುನರ್ ನಿರ್ಮಿಸಬಾರದು. ಕಾನೂನುಬಾಹಿರ ಕೃತ್ಯವೆಸಗಿದ ಅಧಿಕಾರಿಗಳು, ತಮ್ಮ ಸಂಬಳದಿಂದ ಸದರಿ ವೆಚ್ಚವನ್ನು ಸಂದಾಯ ಮಾಡಲು ನಿರ್ದೇಶಿಸಲಾಗಿದೆ. ರಾಜ್ಯವು ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಮುನಿಸಿಪಾಲಿಟಿಯ ಆಯುಕ್ತರ ಸೇವಾ ದಾಖಲಾತಿಗಳಲ್ಲಿ ಮೇಲ್ಕಂಡ ಅಭಿಪ್ರಾಯೋಕ್ತಿಗಳನ್ನು ದಾಖಲಿಸಲು

ನಿರ್ದೇಶಿಸಿದೆ. ಅರ್ಜಿದಾರನು, ಮತ್ತೊಂದು ಸ್ಥಳದಲ್ಲಿ ಎಲ್ಲಿಯಾದರೂ ಮನೆಯನ್ನು ತೆಗೆದುಕೊಳ್ಳುವ ಕಾರಣಕ್ಕೆ ಆರ್ಥಿಕ ನಷ್ಟವನ್ನು ಅನುಭವಿಸಿದರೆ, ದಾವೆಯನ್ನು ಹೂಡಲು ಹಾಗೂ ಸಂಬಂಧಪಟ್ಟವರಿಂದ ನಷ್ಟಗಳನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವರು”.

14. ಮೇಲಿನ ಸನ್ನಿವೇಶಗಳಲ್ಲಿ, ಈ ಅರ್ಜಿಗಳು ಯಶಸ್ವಿಯಾಗಿವೆ; ಎದುರುದಾರರ ಪರಮಾದೇಶ ರಿಟ್ ಅಂಶಗಳು, ಅರ್ಜಿದಾರರು ಅತಿಕ್ರಮಿಸಿಕೊಂಡ ವಿವಾದವನ್ನು ಕರ್ನಾಟಕ ಪಟ್ಟಣ ಪುರಸಭಾ ಅಧಿನಿಯಮ, 1986ರ 82ನೇ ಪ್ರಕರಣ ಅಥವಾ ಪ್ರಕರಣದ ಸಂಗತಿಗಳಿಗೆ ಅನ್ವಯವಾಗಬಹುದಾದ ಇತರ ಯಾವುದೇ ಕಾನೂನಿಗೆ ಅನುಸಾರವಾಗಿ ಎದುರುದಾರ–ಜಿಲ್ಲಾಧಿಕಾರಿಯವರು ನಿರ್ಧರಿಸಿದ ನಂತರ ಅರ್ಜಿ ಸ್ವತ್ತುಗಳು/ಕಟ್ಟಡಗಳು/ನಿರ್ಮಿತಿಗಳಲ್ಲಿ ಅವರು ಮಧ್ಯಪ್ರವೇಶಿಸುವುದರಿಂದ ನಿರ್ಬಂಧಪಡಿಸಲಾಗಿದೆ.

ಮೇಲಿನ ಯಾವುದೇ ರಿಟ್ ಅರ್ಜಿಗಳಲ್ಲಿ, ಕಟ್ಟಡಗಳಿಗೆ ನಷ್ಟವುಂಟುಮಾಡುವುದು ಅಥವಾ ಕೆಡವಿಹಾಕುವುದಕ್ಕೆ, ನಷ್ಟಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ನಿರ್ಧರಣೆಯನ್ನು ಕೋರುವ ಮನವಿಯನ್ನು ಸಲ್ಲಿಸಲು ಅದರ ಮಾಲೀಕರಿಗೆ ಸ್ವಾತಂತ್ರ್ಯ ನೀಡುವುದು ಹಾಗೂ ನಷ್ಟಪರಿಹಾರ ಅನುದಾನಕ್ಕೆ, ಮೂರು ತಿಂಗಳುಗಳ ಬಾಹ್ಯಮಿತಿಯೊಳಗೆ ಎದುರುದಾರ–ಜಿಲ್ಲಾಧಿಕಾರಿಯವರನ್ನು ಪರಿಗಣಿಸತಕ್ಕದ್ದು. ಜೊತೆಗೆ ಯಾವುದೇ ಸ್ವರೂಪದ ನಷ್ಟಪರಿಹಾರಕ್ಕೆ ಸಿವಿಲ್ ನ್ಯಾಯಾಲಯದ ಮುಂದೆ ಬಾಧಿತನು ಕೋರಬಹುದು.

ಮೇಲಿನ ವಿಚಾರಣೆಯನ್ನು ನಿರ್ದೇಶಿಸಿದ ತರುವಾಯ, ನಷ್ಟ/ಕೆಡವುವುದಕ್ಕೆ ಜವಾಬ್ದಾರರಾದ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸತಕ್ಕದ್ದು ಹಾಗೂ ಅರ್ಜಿದಾರರಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಸದರಿ ಅಧಿಕಾರಿಗಳಿಂದ ವಸೂಲಿ

ಮಾಡತಕ್ಕದ್ದು. ಅಷ್ಟೇ ಅಲ್ಲದೆ, ಸದರಿ ಅಧಿಕಾರಿಗಳ ಸೇವಾ ದಾಖಲಾತಿಯಲ್ಲಿ ಪ್ರತಿಕೂಲ ಷರಾ ನಮೂದನೆಯನ್ನು ಮಾಡತಕ್ಕದ್ದು.

ನಷ್ಟವನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟ ಅನುಪಾಲನಾ ವರದಿ, ಬಾಧಿತರಾದ ಅರ್ಜಿದಾರರಿಗೆ ನೀಡಿದ ನಷ್ಟಪರಿಹಾರ ಸಂದಾಯ, ತಪ್ಪಿತಸ್ಥ ಅಧಿಕಾರಿಗಳಿಂದ ಮಾಡಿದ ಅದರ ವಸೂಲಿ ಹಾಗೂ ಅವರ ಸೇವಾ ದಾಖಲಾತಿಗಳಲ್ಲಿ ಪ್ರತಿಕೂಲ ಷರಾ ನಮೂದು ಮಾಡಿರುವುದನ್ನು ಈ ದಿನದಿಂದ ಲೆಕ್ಕ ಮಾಡಿಕೊಂಡು ನಾಲ್ಕು ತಿಂಗಳುಗಳೊಳಗೆ ಸಲ್ಲಿಸತಕ್ಕದ್ದು.